# ಯಡಿಯೂರು ಔಷಧಾಲಯ

ಅ. ಮಂಜೂರಾಗಿರುವ ಹುದ್ದೆಗಳು

| | ಹುದ್ದೆಗಳ ಹೆಸರು | ಹುದ್ದೆಯ ಸಂಖ್ಯೆ | ವೇತನ ಶ್ರೇಣಿ |
|---|---|---|---|
| | **ಅಧಿಕಾರಿ** | | |
| 1. | ಸಹಾಯಕ ಶಸ್ತ್ರ ಚಿಕಿತ್ಸಕರು | 01 | 14,050 – 25,050 |
| | **ಸಿಬ್ಬಂದಿ** | | |
| 2. | ಶುಶ್ರೋಶಕಿ | 01 | 6,000 – 12,000 |
| 3. | ಗ್ರೂಪ್ ಡಿ | 01 | 4,800 – 7,225 |

ಆ. ಸಹಾಯಕ ಶಸ್ತ್ರ ಚಿಕಿತ್ಸೆಕರು ಔಷಧಾಲಯ ಅಧಿಕಾರಿಯ ಮತ್ತು ಸಿಬ್ಬಂದಿಯ ವೇತನ ಡ್ರಾ ಮಾಡುವ ಮತ್ತು ವಿತರಣೆ ಮಾಡುವ ಅಧಿಕಾರ ಹೊಂದಿತ್ತಾರೆ ಕೆ.ಸಿ.ಎಸ್.ಆರ್. ನಿಯಮಾನುಸಾರ ಸಿಬ್ಬಂದಿಯ ರಜೆ ಮಂಜೂರು ಮಾಡುವ ಅಧಿಕಾರ ಹೊಂದಿರುತ್ತಾರೆ. ಲೇಖನ ಸಾಮಗ್ರಿಗಳ ಸಾದಿಲ್ವಾರು ಬಿಲ್ಲುಗಳು ರೂ. 5,000 ರವರಿಗೆ ಡ್ರಾ ಮಾಡುವ ಅಧಿಕಾರ ಹೊಂದಿರುತ್ತಾರೆ ಯೂಸರ್ ಫೀ ವಸೂಲು ಮಾಡುವ ಮತ್ತು ಬ್ಯಾಂಕಿಗೆ ಜಮಾ ಮಾಡುವ ಅಧಿಕಾರ ಹೊಂದಿರುತ್ತಾರೆ.

**ಸಹಾಯಕ ಶಸ್ತ್ರ ಚಿಕಿತ್ಸಕರು :** ಹೊರರೋಗಿಗಳ ತಪಾಸಣೆ ಮತ್ತು ಸಾಮಾನ್ಯ ಖಾಯಿಲೆಗಳಿಗೆ ಚಿಕಿತ್ಸೆ ನೀಡುವುದು, ತುರ್ತು ಚಿಕಿತ್ಸೆಗಳು ಹಾಗೂ ಅಘಘಾತ ಹೊಂದಿದವರಿಗೆ ಪ್ರಥಮ ಚಿಕಿತ್ಸೆ ನೀಡುವುದು, ನಾಯಿ ಕಡಿತಕ್ಕೊಳಗಾದ ಸಾರ್ವಜನಿಕರಿಗೆ ಚಿಕಿತ್ಸೆ ನೀಡುವುದು, ಕ್ಷಯ ರೋಗಿಗಳಿಗೆ ಚಿಕಿತ್ಸೆ ಮತ್ತು ಡಿ.ಒ.ಟಿ. ಚಿಕಿತ್ಸೆಯ ಕೌನ್ಸಿಲಿಂಗ್, ಸಾಮಾನ್ಯ ಚಿಕಿತ್ಸಾ ಶಿಬಿರ ಮತ್ತು ಶಾಲಾ ಮಕ್ಕಳ ಆರೋಗ್ಯ ತಪಾಸಣಾ ಶಿಬಿರಗಳಲ್ಲಿ ಕಾರ್ಯ ನಿರ್ವಹಿಸುವುದು, ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಾದ, ಪಲ್ಸ್ ಪೋಲಿಯೋ, ಮಲೇರಿಯಾ, ಕ್ಷಯ ರೋಗ ಇತ್ಯಾದಿಗಳ ಮೇಲ್ವಿಚಾರಣೆ ಮತ್ತು ಅನುಷ್ಠಾನ ಕಾರ್ಯ ನಿರ್ವಹಿಸುವುದು, ಮತ್ತು ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವ ಬಗ್ಗೆ ಸಾರ್ವಜನಿಕರು ಹಾಗೂ ಶಾಲಾ ಮಕ್ಕಳಿಗೆ ಅರಿವು ಮೂಡಿಸುವ ಶಿಬಿರಗಳಲ್ಲಿ ಕಾರ್ಯ ನಿರ್ವಹಿಸುವುದು, ತುರ್ತು ಸಂದರ್ಭಗಳಲ್ಲಿ ರೆಫೆರಲ್ ಆಸ್ಪತ್ರೆಗಳಲ್ಲಿ ನಡೆಯುವ ಶಸ್ತ್ರ ಚಿಕಿತ್ಸಾ ಕಾರ್ಯಕ್ಕೆ ಹಾಜರಾಗಿ ಸಹಾಯ ಮಾಡುವುದು ವಲಯ ಪ್ರದೇಶದಲ್ಲಿ ನಡೆಯುವ ಜಾತ್ರೆ (ರಥೋತ್ಸವ) ಇತ್ಯಾದಿ ವಿಶೇಷ ಸಂಧರ್ಭಗಳಲ್ಲಿ ಜನದಟ್ಟಣೆ ಹೆಚ್ಚಾಗಿರುವ ಸ್ಥಳದಲ್ಲಿ ಮತ್ತು ಮತ ಏಣಿಕೆ ಕೇಂದ್ರಗಳಲ್ಲಿ ನಿಯೋಜಿಸಿರುವ ಆಂಬ್ಯುಲೆನ್ಸ್‌ನಲ್ಲಿ ಕಾರ್ಯ ನಿರ್ವಹಿಸುವುದು.

ಮೇಲಾಧಿಕಾರಿಗಳ ನಿರ್ದೇಶನದ ಮೇರೆಗೆ ಕಾಲಕಾಲಕ್ಕೆ ನಡೆಯುವ ಸಭೆಗಳಿಗೆ ಹಾಜರಾಗುವುದು ಮತ್ತು ನಡವಳಿಕೆಗಳನ್ನು ಕಾರ್ಯರೂಪಕ್ಕೆ ರೂಪಿಸಿಕೊಂಡು ನಿರ್ವಹಣೆ ಮಾಡುವುದು ಹಾಗೂ ಶಿಸ್ತು ಪಾಲನಾ ಅಧಿಕಾರಿಗಳು ನೀಡುವ ಸೂಚನೆಗಳನ್ನು ಪಾಲಿಸುವುದು.

ಪಾಲಿಕೆಯಲ್ಲಿ ವೈದ್ಯರ ಅಭಾವ ಇರುವುದರಿಂದ ಯಡಿಯೂರು ಹೆರಿಗೆ ಆಸ್ಪತ್ರೆಯ ಡಾ॥ ಶೋಭಾರವರು, ಔಷದಾಲಯದ ಶಸ್ತ್ರ ಚಿಕಿತ್ಸಕರ ಕಾರ್ಯವನ್ನು ನಿರ್ವಹಿಸುತ್ತಿರುತ್ತಾರೆ.

ಶುಶ್ರೋಷಕಿ ಹುದ್ದೆಯು ಖಾಲಿ ಇರುವುದರಿಂದ ಹೆರಿಗೆ ಆಸ್ಪತ್ರೆಯ ಶುಶ್ರೋಷಕಿ ಶ್ರೀಮತಿ ಅಕ್ಕಮ್ಮನವರು ಕಾರ್ಯ ನಿರ್ವಹಿಸುತ್ತಿರುತ್ತಾರೆ.

ಶ್ರೀಮತಿ ಅಶ್ವತಮ್ಮ, ಪೌ ಕಾರ್ಮಿಕ ಇವರು ಗ್ರೂಪ್ 'ಡಿ' ಕಾರ್ಯವನ್ನು ನಿಯೋಜನೆ ಮೇರೆಗೆ ನಿರ್ವಹಿಸುತ್ತಿರುತ್ತಾರೆ.

ಡಾ॥ ಹೆಚ್.ಎಸ್. ಜಗನ್ನಾಥ್, ಸಹಾಯಕ ನಿರ್ದೇಶಕರು, (ಪಶುಪಾಲನೆ) ಇವರಿಗೆ ಸಹಾಯಕ ಶಸ್ತ್ರ ಶಸ್ತ್ರಚಿಕಿತ್ಸಕರ ಹುದ್ದೆಯಲ್ಲಿ ವೇತನ ಪಡೆಯಲು ಆಯುಕ್ತರ ಕಛೇರಿಯಿಂದ ಆದೇಶವಿರುತ್ತದೆ. ಅದರಂತೆ ದಿನಾಂಕ : 02–05–2007ರಿಂದ ವೇತನ ಪಡೆಯುತ್ತಿರುತ್ತಾರೆ. ಈಗಿನ ಮೂಲ ವೇತನ ರೂ. 25,050/–.

ಅಧಿಕಾರಿಗಳ ದೂರವಾಣಿ ಸಂಖ್ಯೆ :

**ಡಾ॥ ಹೆಚ್.ಎಸ್. ಜಗನ್ನಾಥ್**

ಮೊಬೈಲ್ : 94806 83607